A.—Sri S. NIJALINGAPPA (Chief Minister).—

(*a*) 5.

(*b*) In accordance with the provisions of the IPS (Appointment by Promotion) Regulations.

ಶ್ರೀ ಸಿದ್ದಯ್ಯ ಕಾತಿಮಠ್.—ಬೇರೆ ಇಲಾಖೆಗಳಲ್ಲಿ ಬಡ್ತಿ ಕೊಡುವಾಗ ಪರ್ಸಂಟೇಜನ್ನು ನಿಗದಿಮಾಡಿದ್ದೀರಿ. ಅಂದಮೇಲೆ ಈ ಪೋಲೀಸ್ ಇಲಾಖೆಯಲ್ಲಿ ಆ ರೀತಿ ಪರ್ಸಂಟೇಜನ್ನು ನಿಗದಿ ಮಾಡಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಆ ಪರ್ಸಂಟೇಜನ್ನು ಸ್ಟೇಟ್ ಪೋಲೀಸ್ ಸರ್ವಿಸ್‌ನಿಂದ ರಿಜರ್ವ್ ಮಾಡಿದೆ.

Drinking water wells in Krishnarajpet Taluk.

* *Q.*—64. Sri N. NANJE GOWDA (Krishnarajpet).—

Will the Government be pleased to state :—

(*a*) the number of Drinking water well works which have been completed out of the incomplete drinking water wells in K. R. Pet Taluk referred to in the reply given to Starred question No. 133 on 8-4-1963 ;

(*b*) the number of wells which were not completed but the final bills have been paid ;

(*c*) the number of wells that have been deepened and completed and the amount spent for the same ; (detailed information may be given) ?

A.—Sri Y. RAMACHANDRA (Deputy Minister for Municipal Administration)

(*a*) 7 out of 15.

(*b*) None.

(*c*) None.

ಶ್ರೀ ಎನ್. ನಂಜೇಗೌಡ.—ಹಿಂದೆ ನನ್ನ 133ನೇ ಪ್ರಶ್ನೆಗೆ ಉತ್ತರ ಕೊಡುವಾಗ ನನ್ನ ತಾಲ್ಲೂಕಿನಲ್ಲಿ 135 ಬಾವಿಗಳ ಕೆಲಸ ಇನ್‌ಕಂಪ್ಲೀಟ್ ಆಗಿದೆಯೆಂದು ಉತ್ತರ ಕೊಟ್ಟಿದ್ದಿರಿ. ಈಗಿನ ನನ್ನ ಪ್ರಶ್ನೆಗೆ ಉತ್ತರವಾಗಿ 15 ಬಾವಿಗಳ ಪೈಕಿ 7 ಬಾವಿಗಳ ಕಾಮಗಾರಿಯನ್ನು ಪೂರ್ತಿಮಾಡಲಾಗಿದೆಯೆಂದು ಹೇಳಿದ್ದೀರಿ. ಈಗ ಕೊಟ್ಟಿರುವ ಉತ್ತರವು ಸರಿಯೇ ಅಥವಾ ಹಿಂದೆ ಕೊಟ್ಟಿರುವ ಉತ್ತರ ಸರಿಯೇ ?

† ಶ್ರೀ ವೈ. ರಾಮಚಂದ್ರ.—ಈಗ ಕೊಟ್ಟಿರುವ ಉತ್ತರ ಸರಿಯಾಗಿದೆ. 15 ಕುಡಿಯುವ ನೀರಿನ ಬಾವಿಗಳ ಕೆಲಸ ಮಾತ್ರ ಉಳಿದಿದೆ. ಕೆಲಸ ಪೂರ್ತಿಯಾಗಿರುವ ಬಾವಿಗಳ ಸಂಖ್ಯೆ 7. ಇನ್ನೂ 8 ಬಾವಿಗಳ ಕೆಲಸ ಆಗಬೇಕಾಗಿದೆ.

ಶ್ರೀ ಎನ್. ನಂಜೇಗೌಡ.—ಹಿಂದೆ ಸೋಷಿಯಲ್ ವೆಲ್‌ಫೇರ್, ಮತ್ತು ಎನ್. ಇ. ಎಸ್. ಬ್ಲಾಕ್ ಇವುಗಳ ಮೂಲಕ 130 ಬಾವಿಗಳನ್ನು ಪೂರ್ತಿಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಈಗ 15 ಬಾವಿಗಳ ಕಾಮಗಾರಿ ವಿಷಯವಾಗಿ ಹೇಳುತ್ತಿದ್ದಾರೆ, ಆ 135 ಬಾವಿಗಳು ಯಾವು ಯಾವುದಕ್ಕೆ ಸೇರಿದೆ ? ಅವುಗಳ ವಿವರವೇನು ?

ಶ್ರೀ ವೈ. ರಾಮಚಂದ್ರ.—ನಾನು ಮೊದಲೇ ಹೇಳಿದ ಹಾಗೆ 15 ಕುಡಿಯುವ ನೀರಿನ ಬಾವಿಗಳ ಪೈಕಿ 7 ಬಾವಿಗಳ ಕೆಲಸ ಈಗಾಗಲೇ ಪೂರ್ತಿಯಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಾವು ಎಷ್ಟು ಕುಡಿಯುವ ನೀರಿನ ಬಾವಿಗಳ ಕಾಮಗಾರಿಯನ್ನು ಪೂರ್ತಿಮಾಡಲಾಗಿದೆಯೆಂದು ಪ್ರಶ್ನೆ ಕೇಳಿದರೆ ಎರ್.ಡಿ. ಸ್ಕೀಮನು, ಎನ್.ಇ.ಎಸ್. ಸ್ಕೀಮು, ಮತ್ತೊಂದು ಸ್ಕೀಮು ಮಗದೊಂದು ಸ್ಕೀಮುಗಳಿಂದ ಕುಡಿಯುವ ನೀರಿನ ಬಾವಿಗಳ ಕೆಲಸ ಇಷ್ಟು ಇನ್‌ಕಂಪ್ಲೀಟ್ ಆಗಿದೆಯೆಂದು ಹೇಳುತ್ತೀರಿ. ಆದ್ದರಿಂದ ಇನ್‌ಕಂಪ್ಲೀಟ್ ಆಗಿರುವುದು ಈಗ ಹದಿನೈದೋ ಅಥವಾ ನೂರಮುವ್ವತ್ತೋ ?

ಶ್ರೀ ವೈ. ರಾಮಚಂದ್ರ.—ಎರ್.ಡಿ. ವರ್ಕ್ಸ್ ಮೂಲಕವೇ ಹಿಂದೆ 15 ಕುಡಿಯುವ ನೀರಿನ ಬಾವಿಗಳ ಕೆಲಸವಾಗಬೇಕಾಗಿದೆಯೆಂದು ಹೇಳಿತ್ತು. ಇವತ್ತೂ ಅದನ್ನೇ ಹೇಳುತ್ತಿದ್ದೇವೆ.

ಶ್ರೀ ಎನ್. ನಂಜೇಗೌಡ.—ಈಗ 7 ಬಾವಿಗಳ ಕಾಮಗಾರಿ ಪೂರ್ತಿಯಾಗಿದೆಯೆಂದು ಉತ್ತರದಲ್ಲಿ ಹೇಳಿದೆ. ಅವುಗಳಲ್ಲಿ ನೀರು ಎಷ್ಟಿದೆ, ಅದಕ್ಕಾಗಿ ಎಷ್ಟು ಹಣವನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ ?

ಶ್ರೀ ವೈ. ರಾಮಚಂದ್ರ.—ಅದರ ವಿವರ ಬಹಳ ಇದೆ. ಇಲ್ಲಿ ಎಲ್ಲವನ್ನೂ ಹೇಳಬೇಕೆಂದರೆ ಹೇಳುತ್ತೇನೆ. 8 ಬಾವಿಗಳ ವಿವರಬೇಕಾದರೂ ಹೇಳುತ್ತೇನೆ. 7 ಬಾವಿಗಳ ಕಾಮಗಾರಿ ಈಗಾಗಲೇ ಪೂರ್ತಿಯಾಗಿದೆ.

ಶ್ರೀ ಎನ್. ನಂಜೇಗೌಡ.—ಹಿಂದೆ ನನ್ನ 133ನೇ ಪ್ರಶ್ನೆಗೆ ಉತ್ತರವಾಗಿ 135 ಕುಡಿಯುವ ನೀರಿನ ಬಾವಿಗಳ ಕಾಮಗಾರಿ ಆಗಬೇಕಾಗಿದೆಯೆಂದು ಹೇಳಿದಿರಿ. ಹಾಗಾದರೆ ಅದರಲ್ಲಿ ಒಂದೂ ಪೂರ್ತಿಯಾಗಲಿಲ್ಲವೇ ?

ಶ್ರೀ ವೈ. ರಾಮಚಂದ್ರ.—ಆ ರೀತಿಯಾಗಿಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ಅದರ ವಿವರವನ್ನು ಹೇಳುತ್ತೇನೆ. 7 ಕುಡಿಯುವ ನೀರಿನ ಬಾವಿಗಳ ಕೆಲಸ ಪೂರ್ತಿಯಾಗಿರತಕ್ಕವು ಯಾವುವೆಂದರೆ, ಚಿಕ್ಕಕಲ್ಲಳ್ಳಿ, ಚಿಕ್ಕನಾಯಕನಹಳ್ಳಿ, ದುದಕನಹಳ್ಳಿ, ಪುರ, ಅಂಜೇನಹಳ್ಳಿ, ಕೊಲಸಿ ಮತ್ತು ಭದ್ರನ್‌ಕೊಪ್ಪಲ್ ಪ್ರದೇಶಗಳಲ್ಲಿನ ಬಾವಿಗಳು. ಇನ್ನೂ 8 ಬಾವಿಗಳ ಕಾಮಗಾರಿ ಪೂರ್ತಿಯಾಗಬೇಕಾಗಿದೆ. ಈ ಕೆಲಸ ಸುಮಾರು 15 ದಿನಗಳೊಳಗೆ ಅಥವಾ ಒಂದು ತಿಂಗಳೊಳಗೆ ಮುಗಿಯುತ್ತದೆ. ಆ ಬಗ್ಗೆ ನಮ್ಮಲ್ಲಿ ವರದಿ ಇದೆ.

ಶ್ರೀ ಎನ್. ನಂಜೇಗೌಡ.—7 ಕುಡಿಯುವ ನೀರಿನ ಬಾವಿಗಳ ಕಾಮಗಾರಿ ಕೆಲಸ ಪೂರ್ತಿಯಾಗಿರುವುದರ ಜೊತೆಗೆ ಚಿಕ್ಕನಾಯಕನಹಳ್ಳಿ, ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿದೆಯೇ ?

ಶ್ರೀ ವೈ. ರಾಮಚಂದ್ರ.—ಚಿಕ್ಕನಾಯಕನಹಳ್ಳಿಯಲ್ಲ, ಚಿಕ್ಕಕಲ್ಲಳ್ಳಿ.

ಶ್ರೀ ಎನ್. ನಂಜೇಗೌಡ.—ಚಿಕ್ಕಕಲ್ಲಳ್ಳಿ ಎಂಬುದು ಕೃಷ್ಣರಾಜಪೇಟೆಯಲ್ಲಲ್ಲ.

ಶ್ರೀ ವೈ. ರಾಮಚಂದ್ರ.—ಇದೆ.

Bulldozers in Public Works Department.

*Q.—71. Sri T. MADIAH GOWDA (Ramanagaram).—

Will the Government be pleased to state :—

(*a*) the number of bulldozers owned by the Public Works Department for the purpose of desilting of tanks ;

(*b*) the number of such vehicles Government intend purchasing in near future ;

(*c*) the number of tanks that are desilted during the last two years in each of the Districts in the State ;

(*d*) the extent of land brought under irrgation by such desilting during these two years ?

A.—Sri ALUR HANUMANTHAPPA (Deputy Minister for Minor Irrigation).—

(*a*) Desilting by bulldozers is not economical and therefore, there are no bulldozers earmarked for this purpose.

(*b*) Nil.

(*c*) Nil.

(*d*) Nil.